(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ನೀವುಗಳು ಹೇಳಿದ ರೀತಿಯಲ್ಲಿಯೇ ಸರ್ಕಾರ ಉತ್ತರ ಕೊಡಬೇಕೆ?

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಜೆ.ಸಿ.ಮಾಧುಸ್ವಾಮಿ, ವಾಟಾಳ್ ನಾಗರಾಜ್, ಕೆ.ಜಯಪ್ರಕಾಶ್ ಹೆಗ್ಡೆ, ಜಿ.ವಿ.ಶ್ರೀರಾಮರೆಡ್ಡಿ, ಎನ್. ರಾಜೇಂದ್ರನ್ ರವರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

xxx xxx xxx

(1-30 PM)

ಶ್ರೀ ಪಿ.ಜಿ.ಆರ್.ಸಿಂಧ್ಯ : ನಾನು ಯಾವುದೇ ರೀತಿಯ ಆವೇಶಗಳಿಗೂ ಸಹಿತ ಒಳಗಾಗಿಲ್ಲ. ಯಾವುದೇ ರೀತಿಯ ಅಸಮಾಧಾನವೂ ಸಹಿತ ನನಗಿಲ್ಲ. ಇದು ವಿಷಗಳಿಗೆ ಅಂತೂ ಅಲ್ಲವೇ ಅಲ್ಲ, ಮತ್ತೆ ನಾನು ತಪ್ಪು ಮಾಡಿದ್ದೇನೆ, ಏಕೆಂದರೆ ನನಗೆ ಸಂಸದೀಯ ವ್ಯವಹಾರಗಳ ಪ್ರಜ್ಞೆ ಕಡಿಮೆ, ಕಾರಣ ಏನೆಂದರೆ ಮೂಲ ಪ್ರಶ್ನೆಗೆ ಎರಡೇ ಉಪ ಪ್ರಶ್ನೆಗಳನ್ನು ಕೇಳುವಂಥಾ ಸಂಪ್ರದಾಯ ಪುಸ್ತಕದಲ್ಲೇ ಉಳಿದಿರುವಂಥಾದ್ದು, ಕಳೆದ 25 ವರ್ಷಗಳಿಂದ ನಾನು ಅನುಭವದಲ್ಲಿ ನೋಡಿರುವಂಥಾದ್ದು. ಆದುದರಿಂದ ನನ್ನ ಉಪ ಪ್ರಶ್ನೆಗಳು ಏನು ಇರಲಿಲ್ಲ. ನಾನು ಏನು ಹೇಳಬೇಕೆಂದು ಇದ್ದೇನೆಂದರೆ, ನಾನು ಸರ್ಕಾರಕ್ಕೆ ಇಡೀ ಒಂದು ವಿಚಾರವನ್ನು ತಿಳಿಸಬೇಕೆಂದು

xxx xxx xxx

ಎದ್ದು ನಿಂತು ಕೊಂಡೆ. ಅದು ಏನು ಎಂದರೆ, ನಾನು ಅದನ್ನು ಹೇಳಿ ಬಿಡುತ್ತೇನೆ. ನೀವು ಸಿಟ್ಟು ಮಾಡಿಕೊಂಡರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ನನ್ನ ಕಡೆಗೆ ಗಮನ ಬರಲಿಲ್ಲವೆನ್ನುವುದಷ್ಟೇ ಹೊರತು, ಬೇರೆ ಏನು ನನಗಿಲ್ಲ. ನಾನು ಹೇಳುತ್ತಲೂ ಇರಲಿಲ್ಲ. ನಾನು ಒಬ್ಬ ಸದಸ್ಯರಾಗಿ, ನನಗೂ ಸಮಯದ ಕಾಲಾವಕಾಶವನ್ನು ನೀವು ಕೊಟ್ಟಿರುವುದನ್ನು ಮರೆತಿಲ್ಲ. ಆದರೆ ಇವತ್ತು ನಾನು ಏನು ಹೇಳಬೇಕೆಂದು ಇದ್ದೇನೆಂಬುದನ್ನು ನಾನು ಹೇಳಿ ಮುಗಿಸುತ್ತೇನೆ. ಅದು ಏನೆಂದರೆ

---

xxx ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಬೆಂಗಳೂರಿನ Race course ಅನ್ನು ಸ್ಥಳಾಂತರ ಮಾಡುತ್ತೇವೆಂದು ಹೇಳುವಂಥಾ ಸರ್ಕಾರಗಳೆಲ್ಲಾ ತಕ್ಷಣ ಕುಸಿದು ಹೊರಟು ಹೋಗಿವೆ. ಇದನ್ನು ಸ್ಥಳಾಂತರ ಮಾಡುತ್ತೇವೆಂದು ಹೇಳಿದ ಮಾನ್ಯ ಗುಂಡೂರಾವ್ ರವರು ತಕ್ಷಣ ಹೊರಟು ಹೋದರು. ಇನ್ನು ಬೇರೆ ಬೇರೆ ಮುಖ್ಯಮಂತ್ರಿಗಳೆಲ್ಲಾ, ಅದೇ ರೀತಿ ಹೊರಟು ಹೋದರು. ನೀವು ಆ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಸದ್ಯಕ್ಕೆ ನಿಮ್ಮ ಸರ್ಕಾರವೇ ಇರಲಿ, ಯಾರಿಗೂ ಚುನಾವಣೆ ಬೇಡವೆಂದು ಹೇಳಬೇಕೆಂದು ಇದ್ದೆ. ನೀವು ನನಗೆ ಸಮಯವನ್ನು ಕೊಟ್ಟಿದ್ದೀರಿ, ಧನ್ಯವಾದಗಳು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಸ್ವಲ್ಪ ಶಾಂತಿಯುತರಾಗಬೇಕೆಂದು ಹೇಳುತ್ತೇನೆ. ನಿಮ್ಮನ್ನು ಈ ರೀತಿ ನೋಡಿ, ಬಹಳ ನೋವಾಗಿದೆ. ಇರಲಿ, ಈಗ ಏನಾಗಿದೆಯೆಂದರೆ, ಮಾನ್ಯ ಎಂ.ಪಿ.ಪ್ರಕಾಶ್‌ರವರೆ, ಬೆಳಿಗ್ಗೆಯಿಂದ ಒಂದೇ ಸಮನೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಮಹಾಭಾರತದ ಒಂದು ಕತೆಯನ್ನು ಹೇಳಿದರು. ಮಹಾಭಾರತದಲ್ಲಿ ಜೂಜು ಇತ್ತು, ಈಗಲೂ ಜೂಜು ಇದೆಯೆಂಬ ವಿಚಾರವನ್ನು ಹೇಳಿದರು. ಮಹಾಭಾರತದಲ್ಲಿ ಆಡಿದಂಥಾ ಜೂಜು ಯಾವುದು? ಅಲ್ಲಿ ಆಡಿದಂಥಾದ್ದು ಪಗಡೆ ಆಟವೇ, ಅಥವಾ ಕುದುರೆ ಜೂಜೇ, ಯಾವುದೆಂಬುದು ಒಂದು. ಇನ್ನು ಅವತ್ತು ಪಣಕ್ಕೆ ಇಟ್ಟಿದ್ದು ಯಾರನ್ನು? ತನ್ನ ಪತಿಯನ್ನೇ ಪಣಕ್ಕಿಟ್ಟರು. ಈಗ ಇಲ್ಲಿ ಯಾರು ಯಾರನ್ನು ಪಣಕ್ಕೆ ಇಡುತ್ತಾರೆಂಬುದನ್ನು ನಾವು ಇನ್ನು ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ. ಸಾವಿರಾರು ಜನರು ಸೇರಿರುತ್ತಾರೆ, ಯಾರು ಯಾರನ್ನು ಪಣಕ್ಕೆ ಇಡುತ್ತಾರೋ ಗೊತ್ತಿಲ್ಲ. ಆದರೆ ಬೆಳಿಗ್ಗೆಯಿಂದ ಇವರು ಉತ್ತರವನ್ನು ಕೊಟ್ಟಿರುವಂಥಾದದ್ದನ್ನು ನೋಡಿದರೆ, ರಾಮಾಯಣದಲ್ಲಿ ಹತ್ತು ತಲೆಯ ವ್ಯಕ್ತಿ ರಾವಣನನ್ನು ನೋಡಿದ್ದೇವೆಂದರೆ, ತಿಳಿದಿದ್ದೇವೆ, ಕೇಳಿದ್ದೇವೆ. ಆದರೆ ಇಲ್ಲಿ ಮಾನ್ಯ ಪ್ರಕಾಶ್‌ರವರೆ ಬೆಳಿಗ್ಗೆಯಿಂದ ಕೊಟ್ಟಿರುವಂಥಾ ಉತ್ತರವನ್ನು ನೋಡಿದರೆ, ಕರ್ನಾಟಕದ ಇತಿಹಾಸದಲ್ಲೇ ಈ ರೀತಿ ಒಬ್ಬರೇ ಸಚಿವರು ಬೆಳಿಗ್ಗೆಯಿಂದ ಸುಮಾರು 12,13 ಸಚಿವರುಗಳ ಉತ್ತರವನ್ನು ಕೊಟ್ಟರು. ಸಂತೋಷ, ನಿಮ್ಮ ಸಾಮರ್ಥ್ಯವನ್ನು, ನಿಮ್ಮ ಸಂತೋಷವನ್ನು ಮೆಚ್ಚಿ ನಿಮಗೆ ಅತ್ಯಂತ ಅಭಿನಂಧನೆಯನ್ನು ನಾವು ಸಲ್ಲಿಸುತ್ತೇವೆ. ಇದರಲ್ಲಿ ಏನು ಬೇರೆ ಮಾತಿಲ್ಲ. ರಾವಣನನ್ನು ಮೀರಿಸಿದಂಥಾ, ನಿಮಗೆ ಹತ್ತು ತಲೆ ಇಲ್ಲದೇ ಇರಬಹುದು, 20 ಕೈ ಇಲ್ಲದೇ ಇರಬಹುದು, ಆದರೆ ಅವೆಲ್ಲಕ್ಕಿಂತ ನಿಮಗೆ ಶಕ್ತಿ

ಇದೆಯೆನ್ನುವಂಥಾ ಮಾತನ್ನು ನಿಮಗೆ ಹೇಳುತ್ತೇವೆ. ರಾಮಾಯಣದಲ್ಲಿ ರಾವಣ ಶಕ್ತಿವಂತನೆಂದು ಹೇಳುತ್ತಾರೆ. ಅದು ನಿಜ, ಆದರೆ ಅವೆಲ್ಲವೂ ನಡೆಯುವುದಿಲ್ಲ. ಲಕ್ಷ್ಮಣ ರೇಖೆ, ಅದಕ್ಕೆ ಈಗ ಬೆಲೆ ಇಲ್ಲ, ಅಗ್ನಿ ಪರೀಕ್ಷೆ ಅದಕ್ಕೆ ಬೆಲೆ ಇಲ್ಲ, ಆಗ ಸೀತೆ ಅಗ್ನಿಗೆ ಬಿದ್ದ ತಕ್ಷಣ ಮತ್ತೆ ಸೀತೆ ವಾಪಸ್ಸು ಬಂದರು. ಈಗ ಯಾರಾದರೂ ಅಗ್ನಿ ಪರೀಕ್ಷೆಗೆ ಹೋದರೆ, ಬೂದಿ ಸಿಗುತ್ತದೆ. ಆದುದರಿಂದ ಅವತ್ತಿನ ಅಗ್ನಿ ಪರೀಕ್ಷೆಗೂ, ಇವತ್ತಿನ ಅಗ್ನಿ ಪರೀಕ್ಷೆಗೂ, ಅವತ್ತಿನ ಲಕ್ಷ್ಮಣ ರೇಖೆಗೂ, ಇವತ್ತಿನ ಲಕ್ಷ್ಮಣ ರೇಖೆಗೂ ಬಹಳ ವ್ಯತ್ಯಾಸವಿದೆ. ಇವತ್ತು ಯಾರು ಅಗ್ನಿಪರೀಕ್ಷೆ ಎನ್ನುವಂಥಾ ಪದವನ್ನು ಹೇಳಲೂ ಬಾರದು. ಲಕ್ಷ್ಮಣ ರೇಖೆ ಎಂಬ ಪದವನ್ನು ಹೇಳಲೂ ಬಾರದು. ಆ ರೀತಿ ಅಗ್ನಿ ಪರೀಕ್ಷೆ ಆಗುವುದಿಲ್ಲ. ಆ ರೀತಿ ಅಗ್ನಿ ಪರೀಕ್ಷೆಗೆ ಹೋದ ತಕ್ಷಣ ನಾವು ಬೂದಿಯನ್ನು ಕಾವೇರಿ ನದಿಗೆ ಬಿಡಬೇಕು. ಆದುದರಿಂದ ಅಗ್ನಿ ಪರೀಕ್ಷೆ ಆಗುವುದಿಲ್ಲ. ನಾನು ಏನು ಹೇಳುತ್ತೇನೆಂದರೆ, ಜೂಜಿನ ಮೈದಾನವನ್ನು ತೆಗೆಯುವಂಥಾದ್ದು ಸ್ಪಷ್ಟ. ಮಾನ್ಯ ಸಚಿವರು ಜೂಜಿನ ಮೈದಾನವನ್ನು ತೆಗೆಯುವ ಬಗ್ಗೆ ಅವರ ಸ್ಪಷ್ಟವಾದ ಚಿತ್ರವಿಲ್ಲ. ಆದುದರಿಂದ ನಾನು ಸಭಾ ತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರನ್ನು ಒಂದು ಉಪ ಪ್ರಶ್ನೆಯ ಮೂಲಕ ಸ್ಪಷ್ಟವಾಗಿ ಕೇಳಿದ್ದೇನೆ. 15 ಎಕರೆ ಜಮೀನು ಒತ್ತುವರಿಯಾಗಿದೆ, ಈ ಒತ್ತವರಿಯಾದಂಥಾ ಜಮೀನನ್ನು ಪತ್ತೆ ಹಚ್ಚುವ ಸಲುವಾಗಿ, ಸದನ ಸಮಿತಿಯನ್ನು ಏನು ನೇಮಕ ಮಾಡಲಾಗಿದೆ, ಆ ಸಮಿತಿಗೆ ಇದನ್ನು ವಹಿಸುತ್ತೀರಾ, ಹೇಗೆ ಎಂದು ನಾನು ಕೇಳಿದ್ದೇನೆ. ಅದು ಆಗಿದೆಯೋ, ಇಲ್ಲವೋ, ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರವಿಲ್ಲ ವೆಂದರೆ ಆಮೇಲೆ ಉತ್ತರವನ್ನು ಕೊಡಲಿ. ಇದನ್ನು ಆ ಸದನ ಸಮಿತಿಗೆ enquiry ಮಾಡುವುದಕ್ಕೆ ಕೊಟ್ಟರೆ ಏನು ತಪ್ಪು ಇದೆ? ಮಾನ್ಯ ರಾಮಸ್ವಾಮಿ ಯವರು ಒಳ್ಳೆಯ report ಅನ್ನು ಕೊಟ್ಟಿದ್ದಾರೆ. ನೀವು ಏಕೆ ಸದನ ಸಮಿತಿಗೆ ಇದನ್ನು ಕೊಡಬಾರದು? ಅದನ್ನು ಸಮಿತಿಗೆ ಕೊಡಿ, ಇದರ ಬಗ್ಗೆ ಸರ್ಕಾರ ಏಕೆ ನಿರ್ಲಕ್ಷ್ಯ ವಹಿಸುತ್ತಿದೆಯೋ, ಗೊತ್ತಾಗುತ್ತಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯರವರು ತಪ್ಪಾಗಿ ಭಾವಿಸಿಕೊಂಡಿದ್ದಾರೆ. ಇತ್ತೀಚೆಗೆ Business Advisory Committee ಯಲ್ಲಿ ಎರಡು ಉಪ ಪ್ರಶ್ನೆಯನ್ನು ಕೇಳಬೇಕೆಂದು ಆಯಿತು, ಅದನ್ನು ನಾನು ಗಮನಕ್ಕೆ ತಂದೆ. ನಾನು ಅವರನ್ನು ಕುರಿತು ಆ ಮಾತನ್ನು ಹೇಳಿಲ್ಲ. ತಮಗೆ ಸಂಸದೀಯ ವ್ಯವಹಾರಗಳ ಬಗ್ಗೆ ಹೆಚ್ಚಿನ ಅನುಭವವಿದೆ ಯೆನ್ನುವಂಥಾದ್ದನ್ನು ಒಪ್ಪುತ್ತೇನೆ. ಇಲ್ಲಿ ಏನು ಮಾತನ್ನು ಆಡಿದರೂ ಕೂಡ, ಅದು ಅಪಾರ್ಥಕ್ಕೆ ಎಡೆ ಮಾಡಿಕೊಡುವಂಥಾ ಸ್ಥಿತಿ ಬರಬಹುದು. ಆ ಕಾರಣಕ್ಕಾಗಿ ನಾನು ತಮ್ಮ ವಿಚಾರದಲ್ಲಿ ಆ ಪ್ರಶ್ನೆಯನ್ನು ಮಾತನಾಡಿಲ್ಲ. ಇಲ್ಲಿ ಇತ್ತೀಚೆಗೆ ನಡೆದಿರುವಂಥಾ Business Advisory Committee ಯಲ್ಲಿ ಈ ಉಪ ಪ್ರಶ್ನೆಗಳನ್ನು ಇಷ್ಟಕ್ಕೆ ಸೀಮಿತಗೊಳಿಸಬೇಕು. ಒಂದು ಗಂಟೆಯ ಅವಧಿಯಲ್ಲಿ ಪ್ರಶ್ನೋತ್ತರಗಳನ್ನು ಮುಗಿಸಬೇಕು. ಇಲ್ಲಿಯೂ ಪಾರ್ಲಿಮೆಂಟ್ ನಲ್ಲಿ ಹೇಗೆ ಇದೆಯೋ, ಹಾಗೆ ಮಾಡಬೇಕೆಂದು ಆಗಿದೆ. ಇಲ್ಲಿ ಬೆಳಿಗ್ಗೆ 10.45 ಗಂಟೆಗೆ ಪ್ರಶ್ನೋತ್ತರ ಕಲಾಪ ಪ್ರಾರಂಭವಾಗಿದ್ದು ಈಗ ಮಧ್ಯಾಹ್ನ 1.45 ಗಂಟೆಯಾಗಿದೆ. ಬೇರೆ ಕಲಾಪಗಳು ವ್ಯತ್ಯಯವಾಗುತ್ತದೆಂದು, ಬೇರೆಯವರ ಪ್ರಶ್ನೆ ಬಂದಿದೆ. ತಾವು ನಿನ್ನೆ ಇಲ್ಲಿ ಇರಲಿಲ್ಲ. ಮೊನ್ನೆ ಕೂಡ ಕೆಲವು ಸದಸ್ಯರು ಎದು ಹೋದರು. ಹಿಂದಿನ ಬೆಂಚಿನಲ್ಲಿ ಕುಳಿತಿರುವಂಥಾ ಸದಸ್ಯರುಗಳು ಬಹಳ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಆ ಕಾರಣಕ್ಕಾಗಿ ತಾವು ನಮ್ಮ ಬಗ್ಗೆ ಅನ್ಯಥಾ ಭಾವಿಸಬಾರದು. ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ ಯೆಂಬ ಮಾತನ್ನು ಹೇಳುತ್ತೇನೆ. ಇನ್ನು ಮಾನ್ಯ ಬಸವರಾಜ ರಾಯರೆಡ್ಡಿ ಯವರು ಹೇಳಿದ ವಿಚಾರವಾಗಿ, ಇಲ್ಲಿ ಮೂಲ ಪ್ರಶ್ನೆ ಅದು ಇಲ್ಲ. ಇಲ್ಲಿ ಒತ್ತುವರಿಯಾಗಿದೆಯೆಂಬುದರ ಮಾಹಿತಿ ನಮ್ಮ ಹತ್ತಿರವಿಲ್ಲ. ಆ ಪ್ರಶ್ನೆಯ ಬಗ್ಗೆ ನಾನು ತಮಗೆ ಕಳುಹಿಸಿಕೊಡುತ್ತೇನೆಂದು ಹೇಳಿದ್ದೇನೆ. ತಾವು ರಾಮಸ್ವಾಮಿಯವರ ಸಮಿತಿಗೆ ಕೊಡಬೇಕೆನ್ನುವುದರ ಬಗ್ಗೆ ಅವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಅವರು ವರದಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ತಾವು ಪ್ರಸ್ತಾಪ ಮಾಡಿದ ವಿಚಾರದ ಬಗ್ಗೆ ಎಲ್ಲಿ ಒತ್ತುವರಿ ಯಾಗಿದೆಯೆಂಬ ಬಗ್ಗೆ ಸರ್ಕಾರ ಯೋಚನೆ ಮಾಡಿ ನಿರ್ಧಾರವನ್ನು ಮಾಡುತ್ತದೆ. ತಾವು ಮತ್ತೆ ಒಂದು ಉಪ ಪ್ರಶ್ನೆಯನ್ನು ದಯವಿಟ್ಟು ಕೇಳಬಾರದು. ಅದರ ಬಗ್ಗೆ ನಿರ್ಧಾರ ಮಾಡುತ್ತೇವೆ. ಸರ್ಕಾರ ಯೋಚನೆ ಮಾಡುತ್ತದೆಂದ ಮೇಲೆ ಅದಕ್ಕೆ ಹೇಗೆ ಉಪ ಪ್ರಶ್ನೆ ಬರುತ್ತದೆ? ತಾವು ಹೇಳಿ.